
# ಬಾಣಂತಿ-ಮಗುವಿನ ಭೇಟಿ ಅಗತ್ಯವೇ?



**ಬಾಣಂತಿ– ಮಗುವನ್ನು ನೋಡಲು ಆಸ್ಪತ್ರೆಗೆ ಹೋಗುವ ಮೊದಲು ನಿಮ್ಮ ಭೇಟಿ ಅತ್ಯಗತ್ಯವಿದೆಯೇ ಎಂದು ಒಮ್ಮೆ ಯೋಚಿಸಿ.**

■ ಡಾ. ವಿನಯ ಶ್ರೀನಿವಾಸ್

ಬಾಣಂತಿ–ಮಗುವನ್ನು ನೋಡಲು ಆಸ್ಪತ್ರೆಗೆ ಹೊರಟಿದ್ದೀರಾ..? ನಿಲ್ಲಿ, ಹೊರಡುವುದಕ್ಕೆ ಮುನ್ನ ಈ ಕೆಳಗಿನ ವಿಚಾರಗಳನ್ನು ಗಮನಿಸಿ.

ನಮ್ಮ ಬಂಧುಗಳು ಅಥವಾ ಗೆಳತಿಯರು ಮಗುವಿಗೆ ಜನ್ಮ ನೀಡಿದಾಗ, ನಾವು ಸಂಭ್ರಮದಿಂದ ಮಗು ಹಾಗೂ ಬಾಣಂತಿಯನ್ನು ನೋಡಲು, ಅಭಿನಂದನೆಗಳನ್ನು ಸಲ್ಲಿಸಲು ಹೊರಡುತ್ತೇವೆ. ಅಜ್ಜ–ಅಜ್ಜಿಗೆ ಮೊಮ್ಮಗುವನ್ನು, ಚಿಕ್ಕಮ್ಮ–ಚಿಕ್ಕಪ್ಪನಿಗೆ ಕುಟುಂಬದ ಹೊಸ ಅತಿಥಿಯನ್ನು, ಅಕ್ಕನಿಗೆ ಪ್ರೀತಿಯ ತಮ್ಮ ಅಥವಾ ತಂಗಿಯನ್ನು, ಹೀಗೆ ಎಲ್ಲರಿಗೂ ಹೊಸದಾಗಿ ಪ್ರಪಂಚಕ್ಕೆ ಕಾಲಿರಿಸಿದ ಕಂದಮ್ಮನನ್ನು ನೋಡುವ, ಮುದ್ದಾಡುವ ತವಕ.

ಆದರೆ ನಮ್ಮ ಈ ಭೇಟಿಯ ಒಂದು ಮುಖವನ್ನಷ್ಟೇ ನಾವು ತಿಳಿದಿದ್ದೇವೆ. ಬಾಣಂತಿಯ ದೇಹಸ್ಥಿತಿ–ಮನಸ್ಥಿತಿಯ ಹಾಗೂ ಮಗುವಿನ ಆರೋಗ್ಯದ ಬಗ್ಗೆ ನಾವು ಅನೇಕ ಬಾರಿ ಯೋಚಿಸುವುದೇ ಇಲ್ಲ. ಆಗಷ್ಟೇ ಹೆರಿಗೆಯಾದ ಹೆಣ್ಣುಮಗಳು ಬದಲಾದ ತನ್ನ ದೇಹಸ್ಥಿತಿಗೆ ಹಾಗೂ ಹುಟ್ಟಿದ ಕಂದಮ್ಮನಿಗೆ ಹೊಂದಿಕೊಳ್ಳಬೇಡವೆ?

ಸಹಜ ಹೆರಿಗೆಯಾಗಲಿ ಅಥವಾ ಸಿಸೇರಿಯನ್ ಆಗಲಿ.., ಆಕೆಯ ದೇಹಸ್ಥಿತಿ ಮೊದಲಿನಂತಿರುವುದಿಲ್ಲ. ದೇಹದಲ್ಲಿ ನೋವು, ಯೋನಿಯ ರಕ್ತಸ್ರಾವ, ಹಾಲು ಕಟ್ಟಿದ ಭಾರವಾದ ಸ್ತನಗಳು, ಮಲಬದ್ಧತೆ ಮೊದಲಾದ ಕಾರಣಗಳಿಂದ ಆಕೆ ದಣಿದಿರುತ್ತಾಳೆ. ಕೊಂಚ ಏಕಾಂತತೆಯನ್ನೂ ಬಯಸುತ್ತಾಳೆ.

ಆ ಸಮಯದಲ್ಲಿ, ಆಕೆಗೆ ಅತ್ಯಂತ ಆಪ್ತರ (ತಾಯಿ, ಅಕ್ಕ) ಸಹಾಯ ಅತ್ಯಗತ್ಯ. ಮಗುವನ್ನು ಎತ್ತಾಡಲು, ಅಗತ್ಯ ಬಿದ್ದಲ್ಲಿ ವೈದ್ಯರನ್ನು ಅಥವಾ ಶುಶ್ರೂಷಕಿಯನ್ನು ಕರೆಯಲು, ತಾನು ಎದ್ದು ನಡೆದಾಡಲು, ಔಷಧಗಳನ್ನು ಅಂಗಡಿಯಿಂದ ತರಲು.. ಹೀಗೆ ಆ ಸಮಯದಲ್ಲಿ ಆಕೆಗೆ ತನ್ನ ಹತ್ತಿರದವರ ನೆರವು ಅವಶ್ಯವಾಗಿ ಬೇಕಾಗುತ್ತದೆ. ಆದರೆ ಪ್ರತಿ 5 ರಿಂದ 10 ನಿಮಿಷಗಳಿಗೊಮ್ಮೆ ಮಗುವನ್ನು ನೋಡಲೆಂದು ಬರುವ ಸ್ನೇಹಿತರು ಹಾಗೂ ನೆಂಟರುಗಳಿಂದ ಆಕೆಗೆ ಕಿರಿಕಿರಿಯಾಗುತ್ತದೆ. ಬೇಡವಾದ– ಬೇಕಾದ ಮಾತುಗಳನ್ನಾಡುತ್ತಾ, ಗಂಟೆಗಟ್ಟಲೆ ಆಸ್ಪತ್ರೆಯ ಕೋಣೆಯಲ್ಲಿಯೇ ಕುಳಿತು ಬಿಡುವ ಜನರಿಂದ ಆಕೆಯ ವಿಶ್ರಾಂತಿಗೆ ಧಕ್ಕೆ ಬರಬಹುದು. ದಣಿದ ಆಕೆಯ ದೇಹ ಮತ್ತು ಮನಸ್ಸಿಗೆ ಆಯಾಸವಾಗುತ್ತದೆ. ಹೇಳಲೂ ಆಗದೆ, ಅನುಭವಿಸಲೂ ಆಗದೆ ಆಕೆ ಒಳಗೊಳಗೇ ತೊಂದರೆ ಅನುಭವಿಸುತ್ತಾಳೆ. ಮಗುವನ್ನು ಮಲಗಿಸಿ, ತಾನೂ ಮಲಗೋಣವೆಂದು ಹೊರಟ ಆಕೆಗೆ, ನಿರಂತರವಾಗಿ ಬರುವ ಈ ಸಂದರ್ಶನಕಾರರಿಂದ ಖಂಡಿತಾ ಹಿತಕರವೆನಿಸುವುದಿಲ್ಲ.

ಬಾಣಂತಿ–ಮಗುವಿನ ಆರೈಕೆಯಲ್ಲಿ ನಿರತರಾದ ಆಕೆಯ ಆಪ್ತರಿಗೂ ಇದು ಒಂದು ಬಗೆಯ ಹಿಂಸೆಯೇ. ನಿದ್ದೆ–ವಿಶ್ರಾಂತಿಯಿಲ್ಲದೆ ದಣಿದ ಅವರೂ ಸಹ, ಒಲ್ಲದ ಮನಸ್ಸಿನಿಂದ ಬಂದವರೊಡನೆ ಔಪಚಾರಿಕ ಮಾತುಗಳನ್ನಾಡ ಬೇಕಾಗುತ್ತದೆ.

ಅಷ್ಟೇ ಅಲ್ಲ, ಮಗುವಿಗೂ ಈ ಭೇಟಿಗೆಂದು ಬರುವವರಿಂದ ತೊಂದರೆಯೆ ಸರಿ. ಸೊಂಪಾಗಿ ಮಲಗಿರುವ ಕಂದಮ್ಮ, ಪದೇ ಪದೇ ತೆಗೆದು–ಹಾಕುವ ಬಾಗಿಲ ಶಬ್ದದಿಂದ ಬೆಚ್ಚಿ ಎಚ್ಚರಗೊಳ್ಳುತ್ತದೆ.

ವೈದ್ಯಕೀಯ ದೃಷ್ಟಿಯಿಂದಲೂ ನವಜಾತ ಶಿಶು ಹಾಗೂ ಬಾಣಂತಿಯನ್ನು ಅನೇಕ ಜನರು ಭೇಟಿ ಮಾಡುವುದು ಸಮಯೋಚಿತವಲ್ಲ. ನವಜಾತ ಶಿಶುವಿನ ರೋಗನಿರೋಧಕ ಶಕ್ತಿಯು ಬಹಳವೇ ಕಡಿಮೆಯಿರುತ್ತದೆ. ಅದು ಇನ್ನೂ ಪೂರ್ಣ ಪ್ರಮಾಣದಲ್ಲಿ ಪಕ್ವವಾಗಿರುವುದಿಲ್ಲ. ಅಂತಹ ದೇಹಸ್ಥಿತಿಯ ಮಗು ಬಹಳ ಬೇಗನೇ ವಿವಿಧಬಗೆಯ ಸೋಂಕಿಗೆ ಬಲಿಯಾಗುತ್ತದೆ. ಭೇಟಿ ಮಾಡಲು ಬರುವವರ ಜೊತೆಯಲ್ಲಿಯೇ ಅನೇಕ ಬಗೆಯ ಸೂಕ್ಷ್ಮಾಣುಗಳೂ ಕೋಣೆಯ ಒಳಗೆ ಬರುತ್ತವೆ. ಇನ್ನೂ ಪಕ್ವವಾಗದ ಕಂದಮ್ಮನ ರೋಗ ನಿರೋಧಕ ವ್ಯವಸ್ಥೆ ಈ ಸೂಕ್ಷ್ಮಾಣುಗಳೊಡನೆ ಹೋರಾಡಿ, ಜಯಿಸಲು ಅಸಮರ್ಥವಾಗುತ್ತದೆ. ಹಾಗಾಗಿ ಮಗು ಬಹಳ ಬೇಗನೆ ಸೋಂಕಿಗೆ ತುತ್ತಾಗುತ್ತದೆ. ಬಾಣಂತಿಗೂ ಸಹ, ಆ ದಿನಗಳಲ್ಲಿ ಬಹುಬೇಗ ಸೋಂಕು ತಗಲುವ ಸಾಧ್ಯತೆಗಳಿರುತ್ತವೆ.

ಇನ್ನು, ನೋಡಲು ಬರುವ ವ್ಯಕ್ತಿಗೆ ಶೀತ, ಕೆಮ್ಮು ಮತ್ತಿತರ ಸೋಂಕಿನ ಕಾಯಿಲೆಗಳಿದ್ದರಂತೂ ಕೆಲವೇ ನಿಮಿಷಗಳಲ್ಲಿ ಮಗು ಮತ್ತು ಬಾಣಂತಿ ಇಬ್ಬರೂ ಸೂಕ್ಷ್ಮಾಣುವಿನ ಸೋಂಕಿಗೆ ಬಲಿಯಾಗುತ್ತಾರೆ. ಹಾಗಾಗಿ ಭೇಟಿಗೆ ಬರುವವರ ಸಂಖ್ಯೆ ಹೆಚ್ಚಿದಷ್ಟೂ, ಕೋಣೆಯಲ್ಲಿ ಸೂಕ್ಷ್ಮಾಣುಗಳ ಸಂಖ್ಯೆಯೂ ಹೆಚ್ಚುತ್ತದೆ. ಅನೇಕ ಬಗೆಯ ಸೋಂಕಿಗೆ ಆಹ್ವಾನ ಕೊಟ್ಟಂತಾಗುತ್ತದೆ.

ಆದ್ದರಿಂದ, ಬಾಣಂತಿ– ಮಗುವನ್ನು ನೋಡಲು ಆಸ್ಪತ್ರೆಗೆ ಹೋಗುವ ಮೊದಲು ಒಮ್ಮೆ ಯೋಚಿಸಿ. ನಿಮ್ಮ ಭೇಟಿ ಅತ್ಯಗತ್ಯವಾದದ್ದೇ? ಅಥವಾ ಫೋನ್– ಎಸ್‌ಎಂಎಸ್ ಮುಖಾಂತರ ನಿಮ್ಮ ಅಭಿನಂದನಾ ಸಂದೇಶವನ್ನು ರವಾನಿಸಿ, ಕೆಲ ದಿನಗಳ ನಂತರ ಭೇಟಿ ಮಾಡಲು ಸಾಧ್ಯವೇ? ಕೊಂಚ ಯೋಚಿಸಿ, ಮತ್ತೆ ನಿರ್ಧರಿಸಿ. ■